



(ಅವತೀರ್ಣ - ಮಕ್ಕಾದಲ್ಲಿ)

ಪರಮ ದಯಾಮಯನೂ ಕರುಣಾನಿಧಿಯೂ ಆದ ಅಲ್ಲಾಹನ ನಾಮದಿಂದ

بِسْمِ اللّٰهِ الرَّحْمٰنِ الرَّحِيْمِ○

1-4. ಧೂಳೆಬ್ಬಿಸುವ, ಜಲಭರಿತ ಮೇಘಗಳನ್ನು ಹೊರುವ, ಹಗುರವಾಗಿ ಚಲಿಸುವ ಮತ್ತು ಒಂದು ಮಹಾಕಾರ್ಯದ (ಮಳೆಯ) ವಿತರಣೆ ಮಾಡುವ ಮಾರುತಗಳಾಣೆ-

وَالذّٰرِيٰتِ ذَرْوًا ۝١ فَالْحٰمِلٰتِ وِقْرًا ۝٢ فَالْجٰرِيٰتِ يُسْرًا ۝٣ فَالْمُقَسِّمٰتِ اَمْرًا ۝٤

5. ವಾಸ್ತವದಲ್ಲಿ ಯಾವುದರ ಕುರಿತು ನಿಮ್ಮನ್ನು ಎಚ್ಚರಿಸಲಾಗುತ್ತಿದೆಯೋ ಅದು ಸತ್ಯವಾಗಿದೆ.

اِنَّمَا تُوْعَدُوْنَ لَصَادِقٌ ۝٥

6. ಕರ್ಮಗಳ ಪ್ರತಿಫಲವು ಖಂಡಿತವಾಗಿಯೂ ಮುಂದೆ ಬರಲಿಕ್ಕಿದೆ.[1]

وَّاِنَّ الدِّيْنَ لَوَاقِعٌ ۝٦

7. ವಿಭಿನ್ನ ರೂಪಗಳ ಆಕಾಶದಾಣೆ.

وَالسَّمَآءِ ذَاتِ الْحُبُكِ ۝٧

8. (ಪರಲೋಕದ ಕುರಿತು) ನಿಮ್ಮ ಹೇಳಿಕೆಗಳು ಪರಸ್ಪರ ವಿಭಿನ್ನವಾಗಿವೆ-[2]

اِنَّكُمْ لَفِيْ قَوْلٍ مُّخْتَلِفٍ ۝٨

1. ಆಣೆ ಹಾಕಲಾಗಿರುವುದು ಈ ವಿಷಯದ ಕುರಿತೇ ಆಗಿದೆ. ಈ ಆಣೆಯ ಅರ್ಥವೇನೆಂದರೆ- ಯಾವ ರೀತಿಯ ಅನುಪಮವಾದ ಕ್ರಮಬದ್ಧತೆ ಮತ್ತು ವ್ಯವಸ್ಥೆಯೊಂದಿಗೆ ಮಳೆಯ ನಿಯಮ ನಿಮ್ಮ ಕಣ್ಣ ಮುಂದೆ ಜಾರಿಯಲ್ಲಿದೆಯೋ, ಅದರಲ್ಲಿ ಯಾವೆಲ್ಲಾ ಯುಕ್ತಿ ಅಡಕವಾಗಿದೆಯೋ, ಅದೆಲ್ಲವೂ ಈ ಲೋಕ ಕೇವಲ ನಿರರ್ಥಕ ಮತ್ತು ಉದ್ದೇಶರಹಿತವಾದ ಆಟಿಕೆಯಲ್ಲ ಎಂಬುದಕ್ಕೆ ಸಾಕ್ಷ್ಯ ವಹಿಸುತ್ತಿದೆ. ಕೋಟ್ಯಾನುಕೋಟಿ ವರ್ಷಗಳಿಂದ ಇಲ್ಲಿ ನಡೆಯುತ್ತಿರುವುದೆಲ್ಲವೂ ತನ್ನಷ್ಟಕ್ಕೆ ನಡೆಯುತ್ತಿರುವ ಆಟವಲ್ಲ. ಬದಲಾಗಿ ಇದು ಅತ್ಯಂತ ಸಮಗ್ರ ಮತ್ತು ಯುಕ್ತಿಪೂರ್ಣವಾದ ವ್ಯವಸ್ಥೆಯಾಗಿದೆ. ಇಲ್ಲಿನ ಪ್ರತಿಯೊಂದು ಕೆಲಸವೂ ನಿರ್ದಿಷ್ಟ ಯುಕ್ತಿ ಮತ್ತು ಉದ್ದೇಶದೊಂದಿಗೆ ನಡೆಯುತ್ತಿದೆ. ಮಾನವನಿಗೆ ಭೂಮಿಯ ಮೇಲೆ ಅಧಿಕಾರಗಳನ್ನು ಕೊಟ್ಟು ಹಾಗೆಯೇ ಬಿಟ್ಟು ಬಿಡಲು, ತನ್ನ ಅಧಿಕಾರಗಳನ್ನು ಅವನು ಹೇಗೆ ಉಪಯೋಗಿಸಿದನೆಂದು ಎಂದೂ ವಿಚಾರಣೆ ನಡೆಸದಿರಲು ಈ ವ್ಯವಸ್ಥೆಯಲ್ಲಿ ಅವಕಾಶವಿಲ್ಲ.

2. ಅರ್ಥಾತ್- ಯಾವ ರೀತಿ ಆಕಾಶದಲ್ಲಿರುವ ಮೋಡಗಳು ಮತ್ತು ನಕ್ಷತ್ರ ಪುಂಜಗಳ ಆಕಾರಗಳು ಭಿನ್ನ ಭಿನ್ನವಾಗಿದೆಯೋ, ಅದರಲ್ಲಿ ಸಾಮ್ಯತೆ ಕಂಡು ಬರುವುದಿಲ್ಲವೋ ಅದೇ ರೀತಿ ಪರಲೋಕದ ಕುರಿತೂ ನೀವು ತರತರದ ಮಾತುಗಳನ್ನಾಡುತ್ತೀರಿ. ಪ್ರತಿಯೊಬ್ಬನ ಮಾತು ಇನ್ನೊಬ್ಬನ ಮಾತಿಗಿಂತ ಭಿನ್ನವಾಗಿದೆ. ದಿವ್ಯವಾಣಿ ಮತ್ತು ಪ್ರವಾದಿಗಳಿಂದ ನಿರಪೇಕ್ಷನಾಗಿ ಮಾನವ ತನ್ನ ಬಗ್ಗೆ ಮತ್ತು ಈ ಲೋಕದ ಪರಿಣಾಮದ ಬಗ್ಗೆ ತಳೆಯುವ ಯಾವುದೇ ನಿರ್ಧಾರ, ಜ್ಞಾನವಿಲ್ಲದೆ ತೆಗೆದುಕೊಳ್ಳುವ ನಿರ್ಧಾರವೆಂಬುದನ್ನು ಇದು ಸಾರಿ ಹೇಳುತ್ತಿದೆ. ಅನ್ಯಥಾ ಅದರ ಬಗ್ಗೆ ತಿಳಿಯಲು ಮಾನವನ ಬಳಿ ನಿಜವಾಗಿಯೂ ಯಾವುದಾದರೂ ಜ್ಞಾನ ಮೂಲವಿದ್ದರೆ ಇಷ್ಟು ವಿಭಿನ್ನ ಸ್ವರೂಪದ ಮತ್ತು ವಿರೋಧಾಭಾಸಕ್ಕೆ ಆಸ್ಪದವಿರುವಂತಹ ವಿಶ್ವಾಸಗಳು ಹುಟ್ಟುತ್ತಿರಲಿಲ್ಲ.

9. ಸತ್ಯದಿಂದ ವಿಮುಖನಾದವನು ಮಾತ್ರ ಅದರಿಂದ ತಿರುಗಿಸಲ್ಪಡುತ್ತಾನೆ.	يُؤْفَكُ عَنْهُ مَنْ أُفِكَ ۝٩
10. ಅನುಮಾನದ ಆಧಾರದಲ್ಲಿ ತೀರ್ಮಾನ ಮಾಡುವವರು ನಾಶವಾದರು-[3]	قُتِلَ الْخَرَّاصُونَ ۝١٠
11. ಅವರು ಅಜ್ಞಾನದಲ್ಲಿ ಮುಳುಗಿದ್ದಾರೆ ಮತ್ತು ನಿರ್ಲಕ್ಷ್ಯದಲ್ಲಿ ಮೈಮರೆತಿದ್ದಾರೆ-	الَّذِينَ هُمْ فِي غَمْرَةٍ سَاهُونَ ۝١١
12. "ಪ್ರತಿಫಲದ ಆ ದಿನ ಯಾವಾಗ ಬರಲಿದೆ?" ಎಂದು ಅವರು ಕೇಳುತ್ತಾರೆ.	يَسْأَلُونَ أَيَّانَ يَوْمُ الدِّينِ ۝١٢
13. ಅದು, ಇವರು ಅಗ್ನಿಯಲ್ಲಿ ಸುಡಲ್ಪಡುವಂದು ಬರಲಿದೆ.	يَوْمَ هُمْ عَلَى النَّارِ يُفْتَنُونَ ۝١٣
14. "ಈಗ ನೀವು ನಿಮ್ಮ ಕ್ಷೋಭೆಯ ರುಚಿಯನ್ನು ಸವಿಯಿರಿ. ನೀವು ಯಾವುದಕ್ಕಾಗಿ ತವಕ ಪಡುತ್ತಿದ್ದಿರೋ ಅದುವೇ ಇದು" ಎಂದು ಇವರೊಡನೆ ಹೇಳಲಾಗುವುದು.[4]	ذُوقُوا فِتْنَتَكُمْ هَٰذَا الَّذِي كُنْتُمْ بِهِ تَسْتَعْجِلُونَ ۝١٤
15. ಆದರೆ ಧರ್ಮನಿಷ್ಠರು ಮಾತ್ರ ಅಂದು ಉದ್ಯಾನಗಳಲ್ಲೂ ಚಿಲುಮೆಗಳಲ್ಲೂ ಇರುವರು.	إِنَّ الْمُتَّقِينَ فِي جَنَّاتٍ وَعُيُونٍ ۝١٥
16. ಅವರ ಪ್ರಭು ಅವರಿಗೆ ದಯಪಾಲಿಸಿದ್ದೆಲ್ಲವನ್ನೂ ಸಂತೋಷದಿಂದ ಸ್ವೀಕರಿಸುತ್ತಿರುವರು. ಅವರು ಆ ದಿನ ಬರುವುದಕ್ಕೆ ಮುಂಚೆ ಸದಾಚಾರಿಗಳಾಗಿದ್ದರು.	آخِذِينَ مَا آتَاهُمْ رَبُّهُمْ ۚ إِنَّهُمْ كَانُوا قَبْلَ ذَٰلِكَ مُحْسِنِينَ ۝١٦
17. ರಾತ್ರೆ ಸ್ವಲ್ಪವೇ ನಿದ್ರಿಸುತ್ತಿದ್ದರು-	كَانُوا قَلِيلًا مِنَ اللَّيْلِ مَا يَهْجَعُونَ ۝١٧
18. ಮತ್ತು ಅವರು ರಾತ್ರಿಯ ಕೊನೆಯ ಜಾವಗಳಲ್ಲಿ ಕ್ಷಮಾಯಾಚನೆ ಮಾಡುತ್ತಿದ್ದರು.	وَبِالْأَسْحَارِ هُمْ يَسْتَغْفِرُونَ ۝١٨
19. ಅವರ ಸೊತ್ತುಗಳಲ್ಲಿ ಬೇಡುವವರಿಗೂ ವಂಚಿತರಿಗೂ ಹಕ್ಕಿತ್ತು.[5]	وَفِي أَمْوَالِهِمْ حَقٌّ لِلسَّائِلِ وَالْمَحْرُومِ ۝١٩

3. ಅರ್ಥಾತ್- ತಮ್ಮ ಮಿಥ್ಯ ಅಂದಾಜುಗಳ ಕಾರಣದಿಂದ ಅವರು ಯಾವ ಪರಿಣಾಮದತ್ತ ಸಾಗುತ್ತಿದ್ದಾರೆಂದು ಅವರಿಗೆ ತಿಳಿದಿಲ್ಲ. ವಾಸ್ತವದಲ್ಲಿ ಪರಲೋಕದ ಬಗ್ಗೆ ತಪ್ಪು ನಿರ್ಧಾರ ತಳೆದು ಅನುಸರಿಸಲಾಗುವ ಯಾವುದೇ ಮಾರ್ಗ ವಿನಾಶದೆಡೆಗೆ ಹೋಗುತ್ತದೆ.

4. 'ಪ್ರತಿಫಲದ ಆ ದಿನ ಯಾವಾಗ ಬರಲಿದೆ?' ಎಂಬ ಸತ್ಯನಿಷೇಧಿಗಳ ಪ್ರಶ್ನೆಯಿಂದ ಧ್ವನಿಸುವ ಅರ್ಥವೇನೆಂದರೆ- ನಾವು ಅದನ್ನು ನಿರಾಕರಿಸಿದ್ದೇವೆ. ನಿರಾಕರಣೆಯ ಶಿಕ್ಷೆ ನಮ್ಮ ಪಾಲಿಗೆ ನಿಶ್ಚಿತವಾಗಿ ಬಿಟ್ಟಿದೆ. ಹಾಗಿದ್ದರೂ ಅದು ಯಾಕೆ ಎದುರಾಗುತ್ತಿಲ್ಲ?

5. ಬೇರೆ ಪದಗಳಲ್ಲಿ ಹೇಳುವುದಾದರೆ ಒಂದೆಡೆ ಅವರು ತಮ್ಮ ಪ್ರಭುವಿನ ಹಕ್ಕುಗಳನ್ನು ಗುರುತಿಸಿ ಅದನ್ನು ಈಡೇರಿಸುತ್ತಿದ್ದರು. ಇನ್ನೊಂದೆಡೆ

20. ದೃಢವಿಶ್ವಾಸವಿರಿಸುವವರಿಗೆ ಭೂಮಿಯಲ್ಲಿ ಅಸಂಖ್ಯಾತ ನಿದರ್ಶನಗಳಿವೆ-	وَفِي الْأَرْضِ آيَاتٌ لِلْمُوقِنِينَ ﴿٢٠﴾
21. ಮತ್ತು ಸ್ವತಃ ನಿಮ್ಮ ಅಸ್ತಿತ್ವದಲ್ಲೂ ಇವೆ. ನಿಮಗೇನು ಕಾಣುವುದಿಲ್ಲವೇ?	وَفِي أَنْفُسِكُمْ ۚ أَفَلَا تُبْصِرُونَ ﴿٢١﴾
22. ಆಕಾಶದಲ್ಲೇ ನಿಮ್ಮ ಜೀವನಾಧಾರವೂ ನಿಮಗೆ ವಾಗ್ದಾನ ಮಾಡಲಾಗುತ್ತಿರುವ ವಸ್ತುವೂ ಇದೆ.[6]	وَفِي السَّمَاءِ رِزْقُكُمْ وَمَا تُوعَدُونَ ﴿٢٢﴾
23. ಆದುದರಿಂದ ಆಕಾಶ ಮತ್ತು ಭೂಮಿಯ ಪ್ರಭುವಿನಾಣೆ! ಇದು ಸತ್ಯವಾಗಿದೆ. ನೀವು ಮಾತನಾಡುತ್ತಿರುವಷ್ಟೇ ಖಚಿತವಾಗಿದೆ.	فَوَرَبِّ السَّمَاءِ وَالْأَرْضِ إِنَّهُ لَحَقٌّ مِثْلَ مَا أَنَّكُمْ تَنْطِقُونَ ﴿٢٣﴾ ع
24. ಸಂದೇಶವಾಹಕರೇ, ಇಬ್‌ರಾಹೀಮರ ಸನ್ಮಾನ್ಯ ಅತಿಥಿಗಳ ವೃತ್ತಾಂತವು ನಿಮಗೆ ತಲುಪಿದೆಯೇ?	هَلْ أَتَاكَ حَدِيثُ ضَيْفِ إِبْرَاهِيمَ الْمُكْرَمِينَ ﴿٢٤﴾ وقف لازم
25. ಅವರು, ಅವರ (ಇಬ್‌ರಾಹೀಮರ) ಬಳಿಗೆ ಬಂದು 'ತಮಗೆ ಸಲಾಮ್' ಎಂದರು. ಅವರು, "ನಿಮಗೂ ಸಲಾಮ್ ಅಪರಿಚಿತ ಜನರು!" ಎಂದರು.[7]	إِذْ دَخَلُوا عَلَيْهِ فَقَالُوا سَلَامًا ۖ قَالَ سَلَامٌ قَوْمٌ مُنْكَرُونَ ﴿٢٥﴾
26. ತರುವಾಯ ಅವರು ಮೆಲ್ಲನೆ ತಮ್ಮ ಮನೆಯವರ ಬಳಿಗೆ ಹೋದರು ಮತ್ತು ಒಂದು (ಹುರಿದ) ಕೊಬ್ಬಿದ ಕರುವನ್ನು ತಂದರು.	فَرَاغَ إِلَىٰ أَهْلِهِ فَجَاءَ بِعِجْلٍ سَمِينٍ ﴿٢٦﴾

ಅಲ್ಲಾಹನು ನೀಡಿದ ಸ್ವಲ್ಪ ಅಥವಾ ಅಧಿಕ ಸಂಪತ್ತಿನಲ್ಲಿ ತಮ್ಮ ಮತ್ತು ತಮ್ಮ ಮಕ್ಕಳು-ಮರಿಗಳಿಗೆ ಮಾತ್ರ ಹಕ್ಕಿದೆ ಎಂದು ಅವರು ಭಾವಿಸುತ್ತಿರಲಿಲ್ಲ. ಸಹಾಯಾಪೇಕ್ಷಿಯಾದ ಪ್ರತಿಯೊಬ್ಬ ಮಾನವನಿಗೂ ಈ ಸಂಪತ್ತಿನಲ್ಲಿ ಹಕ್ಕಿದೆ ಎಂದು ಅವರು ಭಾವಿಸುತ್ತಿದ್ದರು. ಇದು ದಾಸರೊಂದಿಗೆ ಅವರು ವ್ಯವಹರಿಸುತ್ತಿದ್ದ ರೀತಿಯಾಗಿತ್ತು.

6. ಆಕಾಶವೆಂದು ಇಲ್ಲಿ ಬಾನಲೋಕಕ್ಕೆ ಹೇಳಲಾಗಿದೆ. ಜೀವನಾಧಾರವೆಂದರೆ ಲೋಕದಲ್ಲಿ ಮಾನವನ ಬದುಕು ಮತ್ತು ಕೆಲಸಕ್ಕಾಗಿ ನೀಡಲಾಗಿರುವ ಎಲ್ಲಾ ವಸ್ತುಗಳಾಗಿವೆ. ನಿಮಗೆ ವಾಗ್ದಾನ ಮಾಡಲಾಗುತ್ತಿರುವ ಎಲ್ಲಾ ವಸ್ತುವೂ ಎಂದರೆ ನಿರ್ಣಾಯಕ ದಿನ, ಆ ದಿನದ ಜಮಾವಣೆ ಮತ್ತು ಚದುರುವಿಕೆ, ವಿಚಾರಣೆ, ಶಿಕ್ಷೆ-ರಕ್ಷೆ, ಸ್ವರ್ಗ-ನರಕ ಇತ್ಯಾದಿಗಳಾಗಿವೆ. ಕುರ್‌ಆನಿನಲ್ಲೂ ಅಂತೆಯೇ ಎಲ್ಲಾ ಧಾರ್ಮಿಕ ಗ್ರಂಥಗಳಲ್ಲೂ ಅದರ ಬಗ್ಗೆ ವಾಗ್ದಾನ ಮಾಡಲಾಗಿದೆ. ನಿಮ್ಮಲ್ಲಿ ಯಾರಿಗೆ ಎಷ್ಟನ್ನು ಈ ಲೋಕದಲ್ಲಿ ಪ್ರದಾನ ಮಾಡಬೇಕು ಮತ್ತು ನಿಮ್ಮನ್ನು ವಿಚಾರಣೆಗೆ ಯಾವಾಗ ಕರೆಸಬೇಕು ಎಂಬ ತೀರ್ಮಾನ ಬಾನಲೋಕದಲ್ಲೇ ನಡೆಯುತ್ತದೆ ಎಂಬುದು ದಿವ್ಯವಾಣಿಯ ತಾತ್ಪರ್ಯವಾಗಿದೆ.

7. ಹಿನ್ನೆಲೆಯ ಆಧಾರದಲ್ಲಿ ಈ ಉದ್ಧರಣೆಯನ್ನು ಎರಡು ರೀತಿಯಲ್ಲಿ ಅರ್ಥೈಸಬಹುದು. ಮೊದಲನೆಯದಾಗಿ, ಇಬ್‌ರಾಹೀಮ್(ಅ) ಸ್ವತಃ ಆ ಅತಿಥಿಗಳೊಂದಿಗೆ- "ತಮ್ಮಿಂದ ಪ್ರಯೋಜನ ಪಡೆಯುವ ಅವಕಾಶ ಹಿಂದೆಂದೂ ನಮಗೆ ಲಭಿಸಿರಲಿಲ್ಲ. ಪ್ರಾಯಶಃ ನೀವು ಈ ಪ್ರದೇಶಕ್ಕೆ ಹೊಸತಾಗಿ ಬಂದವರಾಗಿರಬಹುದು" ಎಂದು ಹೇಳಿರಬಹುದು. ಎರಡನೇದಾಗಿ ಸಲಾಮ್‌ಗೆ ಉತ್ತರ ಹೇಳಿದ ನಂತರ ಹ. ಇಬ್‌ರಾಹೀಮ್(ಅ) ತಮ್ಮ ಮನಸ್ಸಿನಲ್ಲೇ ಹೀಗೆಂದಿರಬಹುದು ಅಥವಾ ಮನೆಯಲ್ಲಿ ಆತಿಥ್ಯದ ಏರ್ಪಾಟು ಮಾಡಲು ಹೋಗುತ್ತಾ ತಮ್ಮ ಸೇವಕರೊಡನೆ, "ಇವರು ಕೆಲವು ಅಪರಿಚಿತ ವ್ಯಕ್ತಿಗಳು. ಇದಕ್ಕೆ ಮೊದಲು ಇಂತಹ ಉಜ್ವಲ ವ್ಯಕ್ತಿತ್ವ ಮತ್ತು ಗಾತ್ರದ ವ್ಯಕ್ತಿಗಳು ಈ ಪ್ರದೇಶದಲ್ಲಿ ಕಂಡು ಬಂದಿರಲಿಲ್ಲ" ಎಂದಿರಬಹುದು.

27. ಅತಿಥಿಗಳ ಮುಂದಿಟ್ಟು, "ನೀವು ತಿನ್ನುವುದಿಲ್ಲವೇ?" ಎಂದು ಕೇಳಿದರು.

فَقَرَّبَهٗۤ اِلَيۡهِمۡ قَالَ اَلَا تَاۡكُلُوۡنَ ﴿٢٧﴾

28. ತರುವಾಯ ಅವರ ಬಗ್ಗೆ ಅಂಜಿದರು. ಅವರು 'ಹೆದರಬೇಡಿ' ಎಂದರು ಮತ್ತು ಅವರಿಗೆ ಓರ್ವ ಸುಜ್ಞಾನಿ ಪುತ್ರನು ಜನಿಸುವನೆಂಬ ಸುವಾರ್ತೆ ನೀಡಿದರು.[8]

فَاَوۡجَسَ مِنۡهُمۡ خِيۡفَةً ؕ قَالُوۡا لَا تَخَفۡ ؕ
وَبَشَّرُوۡهُ بِغُلٰمٍ عَلِيۡمٍ ﴿٢٨﴾

29. ಇದನ್ನು ಕೇಳಿ ಅವರ ಪತ್ನಿಯು ಚೀರುತ್ತ ಮುಂದೆ ಬಂದಳು ಮತ್ತು ತನ್ನ ಮುಖಕ್ಕೆ ಬಡಿದುಕೊಳ್ಳುತ್ತ, 'ವೃದ್ಧೆ, ಬಂಜೆ!' ಎನ್ನ ತೊಡಗಿದಳು.[9]

فَاَقۡبَلَتِ امۡرَاَتُهٗ فِىۡ صَرَّةٍ فَصَكَّتۡ
وَجۡهَهَا وَقَالَتۡ عَجُوۡزٌ عَقِيۡمٌ ﴿٢٩﴾

30. *ಆಗ ಅವರು, "ನಿನ್ನ ಪ್ರಭು ಹೀಗೆಯೇ ಹೇಳಿರುತ್ತಾನೆ. ಅವನು ಮಹಾ ಯುಕ್ತಿಪೂರ್ಣನೂ ಸರ್ವಜ್ಞನೂ ಆಗಿರುತ್ತಾನೆ" ಎಂದರು.

قَالُوۡا كَذٰلِكِ ۙ قَالَ رَبُّكِ ؕ اِنَّهٗ
هُوَ الۡحَكِيۡمُ الۡعَلِيۡمُ ﴿٣٠﴾

31. ಇಬ್‌ರಾಹೀಮರು ಕೇಳಿದರು, "ದೇವದೂತರೇ, ನಿಮ್ಮ ಮುಂದಿನ ಕಾರ್ಯಚರಣೆ ಏನು?"

قَالَ فَمَا خَطۡبُكُمۡ اَيُّهَا الۡمُرۡسَلُوۡنَ ﴿٣١﴾

الجزء ٢٧

32. ಅವರು ಹೇಳಿದರು, "ನಾವು ಒಂದು ಅಪರಾಧಿ ಜನಾಂಗದೆಡೆಗೆ ಕಳುಹಿಸಲ್ಪಟ್ಟಿದ್ದೇವೆ-[10]

قَالُوۡۤا اِنَّاۤ اُرۡسِلۡنَاۤ اِلٰى قَوۡمٍ مُّجۡرِمِيۡنَ ۙ‏ ﴿٣٢﴾

33. ಅವರ ಮೇಲೆ ಸುಟ್ಟಮಣ್ಣಿನ ಕಲ್ಲುಗಳ ಮಳೆಗರೆಯಲಿಕ್ಕಾಗಿ-

لِنُرۡسِلَ عَلَيۡهِمۡ حِجَارَةً مِّنۡ طِيۡنٍ ۙ‏ ﴿٣٣﴾

34. ನಿಮ್ಮ ಪ್ರಭುವಿನ ಬಳಿ, ಮೇರೆ ಮೀರುವವರಿಗಾಗಿ ಅವುಗಳನ್ನು ಗುರುತು ಹಾಕಿ ಇಡಲಾಗಿದೆ."[11]

مُّسَوَّمَةً عِنۡدَ رَبِّكَ لِلۡمُسۡرِفِيۡنَ ﴿٣٤﴾

35. ತರುವಾಯ[12] ನಾವು ಆ ನಾಡಿನಲ್ಲಿದ್ದ ಸತ್ಯವಿಶ್ವಾಸಿಗಳನ್ನೆಲ್ಲ ಅಲ್ಲಿಂದ ಹೊರತೆಗೆದೆವು-

فَاَخۡرَجۡنَا مَنۡ كَانَ فِيۡهَا مِنَ الۡمُؤۡمِنِيۡنَۚ ﴿٣٥﴾

8. ಇದು ಹ. ಇಸ್‌ಹಾಕ್‌ರ(ಅ) ಜನನದ ಸುವಾರ್ತೆಯಾಗಿತ್ತೆಂದು ಹೂದ್ ಅಧ್ಯಾಯದಲ್ಲಿ ಸ್ಪಷ್ಟಪಡಿಸಲಾಗಿದೆ.

9. ಅರ್ಥಾತ್- ಮೊದಲೇ ನಾನು ವೃದ್ಧೆ. ಜತೆಗೆ ಬಂಜೆ ಕೂಡ. ಹಾಗಿರುವಾಗ ನನಗೆ ಮಗು ಹುಟ್ಟುವುದು ಹೇಗೆ? ಬೈಬಲ್‌ನ ಉದ್ಧರಣೆಯ ಪ್ರಕಾರ ಆಗ ಹ. ಇಬ್ರಾಹೀಮ್‌ರಿಗೆ(ಅ) ನೂರು ವರ್ಷ ಮತ್ತು ಹ. ಸಾರಾರಿಗೆ ತೊಂಭತ್ತು ವರ್ಷ ಪ್ರಾಯವಾಗಿತ್ತು. (ಆದಿಕಾಂಡ-18:17)

* **ಇಲ್ಲಿಂದ 27ನೇ ಕಾಂಡ ಆರಂಭ.**

10. ಅರ್ಥಾತ್- ಲೂತ್ ಸಮುದಾಯ. ಅದರ ಅಪರಾಧಗಳು ಎಷ್ಟು ಹೆಚ್ಚಾಗಿದ್ದುವೆಂದರೆ 'ಅಪರಾಧಿ ಜನಾಂಗ' ಎಂಬ ಪದವೇ ಅದು ಯಾವ ಜನಾಂಗ ಎಂಬುದನ್ನು ತಿಳಿಸಲು ಸಾಕಾಗಿತ್ತು.

11. ಅರ್ಥಾತ್- ಪ್ರತಿಯೊಂದು ಕಲ್ಲಿನ ಮೇಲೂ ಅದು ಯಾರನ್ನು ನಾಶಪಡಿಸಬೇಕೆಂದು ನಿಮ್ಮ ಪ್ರಭುವಿನ ವತಿಯಿಂದ ಗುರುತು ಹಚ್ಚಲಾಗಿದೆ.

12. ಹ. ಇಬ್‌ರಾಹೀಮ್‌ರ(ಅ) ಬಳಿಯಿಂದ ಈ ದೇವಚರರು ಯಾವ ರೀತಿ ಹ. ಲೂತ್‌ರ(ಅ) ಬಳಿಗೆ ತಲಪಿದರು. ಅಲ್ಲಿ ಅವರ ಮತ್ತು ಲೂತ್ ಸಮುದಾಯದ ನಡುವೆ ಏನು ಸಂಭವಿಸಿತು ಎಂಬ ಘಟನೆಗಳನ್ನೆಲ್ಲಾ ನಡುವೆ ಬಿಟ್ಟು ಬಿಡಲಾಗಿದೆ.

36. ಮತ್ತು ಅಲ್ಲಿ ನಾವು ಒಂದು ಮನೆಯ ಹೊರತು ಮುಸ್ಲಿಮರ ಬೇರಾವ ಮನೆಯನ್ನೂ ಕಾಣಲಿಲ್ಲ.

فَمَا وَجَدْنَا فِيهَا غَيْرَ بَيْتٍ مِّنَ الْمُسْلِمِينَ ﴿٣٦﴾

37. ಅನಂತರ ನಾವು ವೇದನಾಯುಕ್ತ ಯಾತನೆಗೆ ಭಯಪಡುವ ಜನರಿಗಾಗಿ ಒಂದು ನಿದರ್ಶನವನ್ನು ಅಲ್ಲಿ ಬಿಟ್ಟೆವು.[13]

وَتَرَكْنَا فِيهَا آيَةً لِّلَّذِينَ يَخَافُونَ الْعَذَابَ الْأَلِيمَ ﴿٣٧﴾

38. ಮೂಸಾರ ವೃತ್ತಾಂತದಲ್ಲಿ (ನಿಮಗೆ ನಿದರ್ಶನವಿದೆ). ನಾವು ಅವರನ್ನು ಸುಸ್ಪಷ್ಟ ಆಧಾರ ಪ್ರಮಾಣದೊಂದಿಗೆ ಫಿರ್‌ಔನನ ಬಳಿಗೆ ಕಳುಹಿಸಿದಾಗ-[14]

وَفِي مُوسَىٰ إِذْ أَرْسَلْنَاهُ إِلَىٰ فِرْعَوْنَ بِسُلْطَانٍ مُّبِينٍ ﴿٣٨﴾

39. ಅವನು ತನ್ನ ಅಧಿಕಾರ ಬಲದ ಬಗ್ಗೆ ಅಹಂಕಾರಪಟ್ಟು, "ಇವನು ಜಾದೂಗಾರನೋ ಹುಚ್ಚನೋ ಆಗಿದ್ದಾನೆ" ಎಂದನು.

فَتَوَلَّىٰ بِرُكْنِهِ وَقَالَ سَاحِرٌ أَوْ مَجْنُونٌ ﴿٣٩﴾

40. ಕೊನೆಗೆ ನಾವು ಅವನನ್ನೂ ಅವನ ಸೇನೆಗಳನ್ನೂ ಹಿಡಿದೆವು ಮತ್ತು ಸಮುದ್ರಕ್ಕೆ ಎಸೆದು ಬಿಟ್ಟೆವು ಮತ್ತು ಅವನು ನಿಂದ್ಯನಾಗಿ ಬಿಟ್ಟನು.

فَأَخَذْنَاهُ وَجُنُودَهُ فَنَبَذْنَاهُمْ فِي الْيَمِّ وَهُوَ مُلِيمٌ ﴿٤٠﴾

41. 'ಆದ್' ಜನಾಂಗದಲ್ಲಿ (ನಿಮಗೆ ನಿದರ್ಶನವಿದೆ). ನಾವು ಅವರ ಮೇಲೆ ಒಂದು ಅಶುಭ ಗಾಳಿಯನ್ನು ಕಳುಹಿಸಿದಾಗ-

وَفِي عَادٍ إِذْ أَرْسَلْنَا عَلَيْهِمُ الرِّيحَ الْعَقِيمَ ﴿٤١﴾

42. ಅದು ತಾನು ಹಾದು ಹೋದ ಪ್ರತಿಯೊಂದು ವಸ್ತುವನ್ನೂ ಶಿಥಿಲಗೊಳಿಸಿಬಿಟ್ಟಿತು.

مَا تَذَرُ مِن شَيْءٍ أَتَتْ عَلَيْهِ إِلَّا جَعَلَتْهُ كَالرَّمِيمِ ﴿٤٢﴾

43. 'ಸಮೂದ್' ಜನಾಂಗದಲ್ಲಿ (ನಿಮಗೆ ನಿದರ್ಶನವಿದೆ) ಒಂದು ನಿಶ್ಚಿತ ಕಾಲದ ವರೆಗೆ ಸುಖಭೋಗಗಳಲ್ಲಿ ಇದ್ದುಕೊಳ್ಳಿರೆಂದು ಅವರೊಡನೆ ಹೇಳಲಾಗಿತ್ತು.

وَفِي ثَمُودَ إِذْ قِيلَ لَهُمْ تَمَتَّعُوا حَتَّىٰ حِينٍ ﴿٤٣﴾

44. ಆದರೆ, ಈ ಎಚ್ಚರಿಕೆ ಸಿಕ್ಕಿದ ಬಳಿಕವೂ ಅವರು ತಮ್ಮ ಪ್ರಭು ವಿನ ಆಜ್ಞೋಲ್ಲಂಘನೆ ಮಾಡಿದರು. ಕೊನೆಗೆ ಅವರು ನೋಡುತ್ತಿದ್ದಂತೆಯೇ ಹಠಾತ್ತನೆ ಸಿಡಿದು ಬೀಳುವ ಒಂದು ಯಾತನೆ ಅವರ ಮೇಲೆರಗಿತು.

فَعَتَوْا عَنْ أَمْرِ رَبِّهِمْ فَأَخَذَتْهُمُ الصَّاعِقَةُ وَهُمْ يَنظُرُونَ ﴿٤٤﴾

13. ಈ ನಿದರ್ಶನವೆಂದರೆ ಮೃತ ಸಾಗರ (Dead Sea) ಅದರ ದಕ್ಷಿಣ ಭಾಗ ಇಂದಿಗೂ ಭಯಾನಕ ವಿನಾಶ ಸಂಭವಿಸಿದ್ದನ್ನು ಸಾರಿ ಹೇಳುತ್ತಿದೆ.

14. ಅರ್ಥಾತ್- ಅತ್ಯಂತ ಸ್ಪಷ್ಟವಾದ ಪವಾಡಗಳು ಮತ್ತು ವ್ಯಕ್ತವಾದ ನಿದರ್ಶನಗಳೊಂದಿಗೆ ಕಳುಹಿಸಿದೆವು. ಆ ಮೂಲಕ ಅವರು ಭೂಮಿ-ಆಕಾಶಗಳ ಒಡೆಯನ ವತಿಯಿಂದ ನೇಮಿಸಲ್ಪಟ್ಟವರು ಎಂಬ ಬಗ್ಗೆ ಯಾವುದೇ ಸಂಶಯ ಉಳಿದಿರಲಿಲ್ಲ.

45. ಅನಂತರ ಅವರಲ್ಲಿ ಎದ್ದು ನಿಲ್ಲುವ ಶಕ್ತಿಯಾಗಲಿ ತಮ್ಮನ್ನು ರಕ್ಷಿಸಿಕೊಳ್ಳುವ ಸಾಮರ್ಥ್ಯವಾಗಲಿ ಉಳಿಯಲಿಲ್ಲ.	فَمَا اسْتَطَاعُوا مِن قِيَامٍ وَمَا كَانُوا مُنتَصِرِينَ ﴿٤٥﴾
46. ಇವರೆಲ್ಲರಿಗಿಂತ ಮುಂಚೆ ನಾವು 'ನೂಹ'ರ ಜನಾಂಗವನ್ನು ನಾಶಗೊಳಿಸಿದೆವು. ಏಕೆಂದರೆ ಅವರು ಕರ್ಮಭ್ರಷ್ಟ ಜನರಾಗಿದ್ದರು.	وَقَوْمَ نُوحٍ مِّن قَبْلُ ۖ إِنَّهُمْ كَانُوا قَوْمًا فَاسِقِينَ ﴿٤٦﴾
47. ನಾವು ಆಕಾಶವನ್ನು ನಮ್ಮ ಶಕ್ತಿಯಿಂದ ನಿರ್ಮಿಸಿರುತ್ತೇವೆ ಮತ್ತು ನಮಗೆ ಅದರ ಸಾಮರ್ಥ್ಯವಿದೆ.[15]	وَالسَّمَاءَ بَنَيْنَاهَا بِأَيْدٍ وَإِنَّا لَمُوسِعُونَ ﴿٤٧﴾
48. ಭೂಮಿಯನ್ನು ನಾವು ಹಾಸಿರುತ್ತೇವೆ, ನಾವು ಅತ್ಯುತ್ತಮವಾಗಿ ಸಮತಟ್ಟುಗೊಳಿಸುವವರಾಗಿದ್ದೇವೆ.	وَالْأَرْضَ فَرَشْنَاهَا فَنِعْمَ الْمَاهِدُونَ ﴿٤٨﴾
49. ನಾವು ಪ್ರತಿಯೊಂದು ವಸ್ತುವಿನ ಜೋಡಿಗಳನ್ನು ಮಾಡಿರುತ್ತೇವೆ,[16]- ನೀವು ಇದರಿಂದ ಪಾಠ ಕಲಿಯಬಹುದೆಂದು.[17]	وَمِن كُلِّ شَيْءٍ خَلَقْنَا زَوْجَيْنِ لَعَلَّكُمْ تَذَكَّرُونَ ﴿٤٩﴾
50. ಆದುದರಿಂದ ನೀವು ಅಲ್ಲಾಹನ ಕಡೆಗೆ ಧಾವಿಸಿರಿ. ನಾನು ನಿಮಗೆ ಅವನ ಕಡೆಯಿಂದ ಸುವ್ಯಕ್ತ ಎಚ್ಚರಿಕೆ ನೀಡುವವನಾಗಿದ್ದೇನೆ.	فَفِرُّوا إِلَى اللَّهِ ۖ إِنِّي لَكُم مِّنْهُ نَذِيرٌ مُّبِينٌ ﴿٥٠﴾
51. ಅಲ್ಲಾಹನೊಂದಿಗೆ ಇತರರನ್ನು ಆರಾಧ್ಯರಾಗಿ ಮಾಡಿಕೊಳ್ಳಬೇಡಿರಿ. ನಾನು ನಿಮಗೆ ಅವನ ಕಡೆಯಿಂದ ಸುವ್ಯಕ್ತ ಎಚ್ಚರಿಕೆ ನೀಡುವವನಾಗಿದ್ದೇನೆ.[18]	وَلَا تَجْعَلُوا مَعَ اللَّهِ إِلَٰهًا آخَرَ ۖ إِنِّي لَكُم مِّنْهُ نَذِيرٌ مُّبِينٌ ﴿٥١﴾

15. ಮೂಲದಲ್ಲಿ 'ವ ಇನ್ನಾ ಲ ಮೂಸಿಊನ್' ಎಂಬ ಪದ ಪ್ರಯೋಗವಾಗಿದೆ. 'ಮೂಸಿಅ್'ನ ಅರ್ಥ ಶಕ್ತಿ ಸಾಮರ್ಥ್ಯ ಹೊಂದಿರುವವನು ಎಂದೂ ಆಗುತ್ತದೆ. ಹಾಗೆಯೇ ವ್ಯಾಪಕಗೊಳಿಸುವವನೆಂದೂ ಆಗುತ್ತದೆ. ಮೊದಲನೆಯ ಅರ್ಥದ ಆಧಾರದಲ್ಲಿ, ಈ ಮಾತಿನ ಅರ್ಥ ಆಕಾಶವನ್ನು ನಾವು ಯಾರ ನೆರವಿನಿಂದಲೂ ಅಲ್ಲ, ಬದಲಾಗಿ ನಮ್ಮ ಸಾಮರ್ಥ್ಯದಿಂದ ಸೃಷ್ಟಿಸಿದೆವು, ಅದರ ಸೃಷ್ಟಿ ನಮ್ಮ ಶಕ್ತಿಗೆ ಮೀರಿದ ವಿಷಯವಾಗಿರಲಿಲ್ಲ. ಹಾಗಿರುವಾಗ ನಾವು ನಿಮ್ಮನ್ನು ಮತ್ತೊಮ್ಮೆ ಸೃಷ್ಟಿಸಲಾರೆವು ಎಂದು ನೀವು ಕಲ್ಪಿಸಿಕೊಂಡದ್ದು ಹೇಗೆ? ಎಂದಾಗುತ್ತದೆ. ಎರಡನೆಯ ಅರ್ಥದ ಆಧಾರದಲ್ಲಿ ಅದರ ಅರ್ಥ, ಈ ವಿಶಾಲ ನಿಸರ್ಗವನ್ನು ನಾವು ಒಮ್ಮೆಗೇ ಸೃಷ್ಟಿಸಿ ಬಿಟ್ಟಿಲ್ಲ. ಬದಲಾಗಿ ನಿರಂತರ ಅದನ್ನು ವಿಶಾಲಗೊಳಿಸುತ್ತಿದ್ದೇವೆ. ಪ್ರತಿಕ್ಷಣವೂ ಅದರಲ್ಲಿ ನಮ್ಮ ಸೃಷ್ಟಿ ವೈಚಿತ್ರ್ಯಗಳು ಕಾಣಿಸುತ್ತಿರುತ್ತವೆ. ಇಂತಹ ಪರಮ ಸಮರ್ಥನಾದ ಸೃಷ್ಟಿಕರ್ತನ ಬಗ್ಗೆ ಅವನಿಗೆ ಮತ್ತೊಮ್ಮೆ ಸೃಷ್ಟಿಸಲು ಸಾಧ್ಯವಿಲ್ಲವೆಂದು ನೀವೇಕೆ ಕಲ್ಪಿಸಿಕೊಳ್ಳುತ್ತೀರಿ.

16. ಅರ್ಥಾತ್- ಭೂಮಿಯಲ್ಲಿರುವ ಎಲ್ಲಾ ವಸ್ತುಗಳನ್ನು ಜೋಡಿಗಳ ರೂಪದಲ್ಲಿ ಸೃಷ್ಟಿಸಲಾಗಿದೆ. ವಿಶ್ವದ ಮಹಾ ಉದ್ಯಮ ಈ ನಿಯಮದ ಆಧಾರದಲ್ಲೇ ನಡೆಯುತ್ತಿದೆ. ಕೆಲವು ವಸ್ತುಗಳು ಮತ್ತೆ ಕೆಲವು ವಸ್ತುಗಳೊಂದಿಗೆ ಜತೆಗೂಡುತ್ತವೆ. ಈ ಜತೆ ಸೇರುವಿಕೆಯಿಂದಲೇ ತರತರದ ಸಂಯುಕ್ತ ವಸ್ತುಗಳು ಅಸ್ತಿತ್ವಕ್ಕೆ ಬರುತ್ತವೆ. ಇಲ್ಲಿರುವ ಯಾವ ವಸ್ತುವೂ ಜತೆಯನ್ನು ಹೊಂದದೆ ಒಂಟಿಯಾಗಿಲ್ಲ. ಬದಲಾಗಿ ವಸ್ತುಗಳೆಲ್ಲವೂ ತನ್ನ ಜತೆಯನ್ನು ಸೇರಿದ ನಂತರವೇ ಪರಿಣಾಮಕಾರಿ ಎನಿಸಿಕೊಳ್ಳುತ್ತವೆ.

17. ಅರ್ಥಾತ್- ಪರಲೋಕವೇ ಈ ಲೋಕದ ಜತೆಯಾಗಿದೆ ಅದರ ಹೊರತು ಲೋಕದ ಜೀವನ ಅರ್ಥಹೀನವೆನಿಸಿಕೊಳ್ಳುತ್ತದೆ ಎಂಬ ಪಾಠ.

18. ಈ ಉದ್ಧರಣೆ ಅಲ್ಲಾಹನ ವಾಣಿಯೇ ಆಗಿದ್ದರೂ, ಇದರಲ್ಲಿ ವ್ಯಕ್ತವಾಗಿರುವ ಮಾತು ಅಲ್ಲಾಹನದಲ್ಲ ಬದಲಾಗಿ ಪ್ರವಾದಿವರ್ಯರದ್ದಾಗಿದೆ(ಸ). ವಾಸ್ತವದಲ್ಲಿ ಅಲ್ಲಾಹನು ತನ್ನ ಪ್ರವಾದಿಯ ಬಾಯಿಯಿಂದ, "ಅಲ್ಲಾಹನೆಡೆಗೆ ಧಾವಿಸಿರಿ. ನಾನು ಅವನ ವತಿಯಿಂದ ನಿಮಗೆ ಎಚ್ಚರಿಕೆ ಕೊಡುವವನಾಗಿದ್ದೇನೆ" ಎಂದು ಹೇಳುತ್ತಿದ್ದಾನೆ.

52. ಹೀಗೆಯೇ ಆಗುತ್ತಾ ಬಂದಿದೆ. ಇವರಿಗಿಂತ ಮುಂಚಿನ ಜನಾಂಗಗಳ ಬಳಿಗೂ ಸಂದೇಶವಾಹಕರು ಬಂದಾಗ ಅವರನ್ನು ಇವರು ಜಾದೂಗಾರ ಅಥವಾ ಹುಚ್ಚ ಎಂದು ಹೇಳದೆ ಬಿಡಲಿಲ್ಲ.

كَذٰلِكَ مَآ اَتَى الَّذِيْنَ مِنْ قَبْلِهِمْ مِّنْ رَّسُوْلٍ اِلَّا قَالُوْا سَاحِرٌ اَوْ مَجْنُوْنٌ ﴿٥٢﴾

53. ಇವರೆಲ್ಲರೂ ಈ ವಿಷಯದಲ್ಲಿ ಪರಸ್ಪರ ಒಪ್ಪಂದ ಮಾಡಿ ಕೊಂಡಿರುವರೇ? ಇಲ್ಲ. ವಾಸ್ತವದಲ್ಲಿ ಇವರೆಲ್ಲರೂ ವಿದ್ರೋಹಿ ಗಳಾಗಿದ್ದಾರೆ.[19]

اَتَوَاصَوْا بِهٖ ۚ بَلْ هُمْ قَوْمٌ طَاغُوْنَ ﴿٥٣﴾

54. ಆದುದರಿಂದ ಸಂದೇಶವಾಹಕರೇ, ಇವರ ಕಡೆಯಿಂದ ಮುಖ ತಿರುಗಿಸಿಕೊಳ್ಳಿರಿ. ನಿಮ್ಮ ಮೇಲೇನೂ ಅಪವಾದವಿಲ್ಲ.

فَتَوَلَّ عَنْهُمْ فَمَآ اَنْتَ بِمَلُوْمٍ ﴿٥٤﴾

55. ಆದರೆ ಉಪದೇಶ ಮಾಡುತ್ತಲಿರಿ. ಏಕೆಂದರೆ ಉಪದೇಶವು ಸತ್ಯವಿಶ್ವಾಸ ಸ್ವೀಕರಿಸುವವರ ಪಾಲಿಗೆ ಉಪಯುಕ್ತವಾಗಿರುತ್ತದೆ.

وَّذَكِّرْ فَاِنَّ الذِّكْرٰى تَنْفَعُ الْمُؤْمِنِيْنَ ﴿٥٥﴾

56. ನಾನು ಯಕ್ಷಗಳನ್ನೂ ಮನುಷ್ಯರನ್ನೂ ಸೃಷ್ಟಿಸಿರುವುದು ನನ್ನ ದಾಸ್ಯ ಮತ್ತು ಆರಾಧನೆಗಾಗಿಯೇ ಹೊರತು ಬೇರಾವುದೇ ಕಾರ್ಯಕ್ಕಾಗಿ ಅಲ್ಲ.[20]

وَمَا خَلَقْتُ الْجِنَّ وَالْاِنْسَ اِلَّا لِيَعْبُدُوْنِ ﴿٥٦﴾

57. ನಾನು ಅವರಿಂದ ಜೀವನಾಧಾರವನ್ನೇನೂ ಬಯಸುವುದಿಲ್ಲ ಮತ್ತು ಅವರು ನನಗೆ ಉಣಿಸಬೇಕೆಂದೂ ಅಪೇಕ್ಷಿಸುವುದಿಲ್ಲ.

مَآ اُرِيْدُ مِنْهُمْ مِّنْ رِّزْقٍ وَّمَآ اُرِيْدُ اَنْ يُّطْعِمُوْنِ ﴿٥٧﴾

58. ಅಲ್ಲಾಹನು ಸ್ವಯಂ ಮಹಾ ಅನ್ನದಾತನು, ಮಹಾಶಕ್ತಿಶಾಲಿ ಮತ್ತು ಪ್ರಚಂಡನಾಗಿದ್ದಾನೆ.

اِنَّ اللّٰهَ هُوَ الرَّزَّاقُ ذُو الْقُوَّةِ الْمَتِيْنُ ﴿٥٨﴾

59. ಆದುದರಿಂದ ಯಾರು ಅಕ್ರಮವೆಸಗಿದರೋ[21] ಅವರ ಪಾಲಿಗೆ,

فَاِنَّ لِلَّذِيْنَ ظَلَمُوْا ذَنُوْبًا مِّثْلَ ذَنُوْبِ

19. ಅರ್ಥಾತ್- ಪ್ರವಾದಿಗಳ ಸಂದೇಶಕ್ಕೆ ಪ್ರತಿಯಾಗಿ ವಿವಿಧ ಜನಾಂಗ ಮತ್ತು ರಾಷ್ಟ್ರಕ್ಕೆ ಸೇರಿದ ಜನರ ಧೋರಣೆ ಸಾವಿರಾರು ವರ್ಷಗಳಲ್ಲಿ ಎಲ್ಲಾ ಕಾಲಗಳಲ್ಲಿ ಸಮಾನವಾಗಿತ್ತು. ಹಿಂದಿನ ಮುಂದಿನ ಜನಾಂಗಗಳೆಲ್ಲವೂ ಒಂದು ಸಭೆ ಕರೆದು ಯಾವುದೇ ಪ್ರವಾದಿ ಸಂದೇಶ ನೀಡಿದರೆ ಅದಕ್ಕೆ ಹೀಗೆ ಉತ್ತರಿಸಬೇಕೆಂದು ತೀರ್ಮಾನಿಸಿರುವುದು ಇದಕ್ಕೆ ಕಾರಣವಲ್ಲ. ನಿಜವಾಗಿ ಅವರ ಧೋರಣೆಯಲ್ಲಿರುವ ಈ ಸಮಾನತೆಗೆ ಕಾರಣ, ಬಂಡಾಯ ಮತ್ತು ವಿದ್ರೋಹ ಅವರ ಸಮಾನ ವೈಶಿಷ್ಟ್ಯವಾಗಿರುವುದೇ ಆಗಿದೆ.

20. ಅರ್ಥಾತ್- ನಾನು ಅವರನ್ನು ಇತರರ ದಾಸ್ಯಕ್ಕಾಗಿ ಸೃಷ್ಟಿಸಿಲ್ಲ ಬದಲಾಗಿ ನನ್ನ ದಾಸ್ಯಕ್ಕಾಗಿ ಸೃಷ್ಟಿಸಿದ್ದೇನೆ. ನಾನು ಅವರ ಸೃಷ್ಟಿಕರ್ತನಾಗಿರುವುದರಿಂದ ಅವರು ನನ್ನ ದಾಸ್ಯ ಕೈಗೊಳ್ಳಬೇಕಾಗಿದೆ. ಇತರರು ಅವರನ್ನು ಸೃಷ್ಟಿಸಿಲ್ಲ. ಹಾಗಿರುವಾಗ ಅವರ ದಾಸ್ಯದ ಹಕ್ಕು ಅವರಿಗೆ ಎಲ್ಲಿಂದ ಬರುತ್ತದೆ. ಅವರ ಸೃಷ್ಟಿಕರ್ತ ನಾನಾಗಿರುವಾಗ ಅವರು ಇತರರ ದಾಸ್ಯ ಕೈಗೊಳ್ಳುತ್ತಾ ತಿರುಗುವುದು ಸಮ್ಮತವಾಗುವುದಾದರೂ ಹೇಗೆ?

21. ಅಕ್ರಮವೆಂದರೆ ಇಲ್ಲಿ ಸತ್ಯ ಮತ್ತು ವಾಸ್ತವಿಕತೆಯ ವಿರುದ್ಧ ಮತ್ತು ಸ್ವತಃ ತನ್ನ ಪ್ರಕೃತಿಯ ವಿರುದ್ಧ ನಡೆಸುವ ಅಕ್ರಮವಾಗಿದೆ.

أَصْحَٰبِهِمْ فَلَا يَسْتَعْجِلُونِ ۝٥٩

ಅವರಂತಿದ್ದವರ ಪಾಲಿಗೆ ಸಿಕ್ಕಿದಂತಹ ಯಾತನೆಯೇ ಸಿದ್ಧವಿದೆ. ಅದಕ್ಕಾಗಿ ಇವರು ನನ್ನೊಡನೆ ತವಕ ಪಡುವುದು ಬೇಡ.

فَوَيْلٌ لِّلَّذِينَ كَفَرُوا۟ مِن يَوْمِهِمُ
ٱلَّذِى يُوعَدُونَ ۝٦٠

60. ಕೊನೆಯಲ್ಲಿ ಯಾವ ದಿನದ ಬಗ್ಗೆ ಎಚ್ಚರಿಸಲಾಗುತ್ತಿದೆಯೋ ಆ ದಿನ ಸತ್ಯನಿಷೇಧಿಗಳಿಗೆ ವಿನಾಶವಿದೆ.